1) 1ನೇ ಏಪ್ರಿಲ್ 1993ರಿಂದ ಹೊರಡಿಸಲಾಗುವ ಎಲ್ಲಾ ಆದೇಶ, ಸುತ್ತೋಲೆ, ಅಧಿಸೂಚನೆ, ಅಧಿಕೃತ ಜ್ಞಾಪನ - ಇತ್ಯಾದಿಗಳು ಕನ್ನಡದಲ್ಲೇ ಇರತಕ್ಕದ್ದು ಎಂದೂ ದಿನಾಂಕ 1ನೇ ಜೂನ್ 1993ರಿಂದ ಎಲ್ಲಾ ಅಧಿಕಾರಿಗಳು, ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಸೇರಿ, ನೌಕರರು ಕಡತಗಳನ್ನು ಕನ್ನಡದಲ್ಲೇ ನಿರ್ವಹಿಸತಕ್ಕದ್ದು ಹಾಗೂ ಕಡತದಲ್ಲಿನ ಟಿಪ್ಪಣಿಗಳು ಕನ್ನಡದಲ್ಲೇ ಇರತಕ್ಕದ್ದು ಎಂದು ಮುಖ್ಯ ಕಾರ್ಯದರ್ಶಿಗಳು ಅಧಿಕೃತ ಜ್ಞಾಪನ ಹೊರಡಿಸಿರುತ್ತಾರೆ.

2) ಕಛೇರಿಗಳಲ್ಲಿರುವ ಆಂಗ್ಲ ಭಾಷಾ ಬೆರಳಚ್ಚು ಯಂತ್ರಗಳನ್ನು ವಾಪಸ್ ಪಡೆದು ಬದಲಿಗೆ ಕನ್ನಡ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡುವ ದೃಷ್ಟಿಯಿಂದ 250 ಕನ್ನಡ ಬೆರಳಚ್ಚು ಯಂತ್ರಗಳನ್ನು ತುರ್ತಾಗಿ ಖರೀದಿಸಲು ಕ್ರಮ ಕೈಗೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬರೀ 250.

ಶ್ರೀ ಎಂ. ವೀರಪ್ಪ ಮೊಯಿಲಿ : ಬೇಕಾದರೆ ಜಾಸ್ತಿ ಮಾಡೋಣ. ಈ ಸಧ್ಯಕ್ಕೆ 250.

ಶ್ರೀ ವಾಟಾಳ್ ನಾಗರಾಜ್ : ಇಂಗ್ಲೀಷ್ ಬೆರಳಚ್ಚು ಯಂತ್ರಗಳು 250 ಇವೆ.

ಶ್ರೀ ಎಂ. ವೀರಪ್ಪಮೊಯಿಲಿ : ಆಯಿತು.

3) ಅಖಿಲ ಭಾರತ ಸೇವೆಗೆ ಸಂಬಂಧಿಸಿದ ರಾಜ್ಯಸರ್ಕಾರದ ಅಧಿಕಾರಿಗಳಿಗೆ ಆಡಳಿತದಲ್ಲಿ ಕನ್ನಡದ ಬಳಕೆ ಬಗ್ಗೆ ಯಾವ ಪ್ರಕಾರ ತರಬೇತಿ ಏರ್ಪಡಿಸಬೇಕೆಂಬ ಬಗ್ಗೆ ತೀರ್ಮಾನಿಸಲಾಗಿದೆ. ಈ ಬಗ್ಗೆ ತರಬೇತಿ ಕಾರ್ಯಕ್ರಮಕ್ಕೆ ಅನುಕೂಲವಾಗುವಂತೆ ಪಠ್ಯಕ್ರಮವನ್ನು ತಯಾರಿಸಲು ಕ್ರಮ ಕೈಗೊಂಡಿದ್ದೇವೆ.

4) ಡಾ॥ ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯವಿಧಾನಗಳನ್ನು ರೂಪಾಸಲು ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆ. ಈ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ದೃಷ್ಟಿಯಿಂದ ಸತತವಾಗಿ ತನಿಖೆ ಕೈಗೊಳ್ಳಲು ಮತ್ತು ಉಪಸಮಿತಿಗೆ ವರದಿ ಮಾಡಲು ಪ್ರತಿ ಇಲಾಖೆಗಳಲ್ಲಿ ಅಧಿಕಾರಿಗಳ ಮತ್ತು ನೌಕರರನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿದೆ.

5) 1ನೇ ಏಪ್ರಿಲ್ 1993ರಿಂದ ಒಂದು ವರ್ಷದವರೆಗೆ ''ಕನ್ನಡ ಜಾಗೃತಿ ವರ್ಷ'' ಎಂದು ಆಚರಿಸಲಾಗುವುದು. ಈ ಸಂದರ್ಭದಲ್ಲಿ ಆಡಳಿತ ಭಾಷೆ, ಕನ್ನಡ, ಸಾಹಿತ್ಯ, ಸಂಸ್ಕೃತಿ ಇತ್ಯಾಂದಿ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗುವುದು. ಕನ್ನಡದ ಸರ್ವತೋಮುಖ ಅಭಿವೃದ್ಧಿಗೆ ಈ ಜಾಗೃತಿ ವರ್ಷವೂ ಹೆಚ್ಚು ಉಪಯುಕ್ತವಾಗುವುದು.

6) ರಾಜ್ಯಮಟ್ಟದಲ್ಲಿ ಕನ್ನಡ ಅನುಷ್ಠಾನದ ಉಸ್ತುವಾರಿ ನೋಡಿಕೊಳ್ಳಲು, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರ ಕಾರ್ಯಾಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗುವುದು. ಜಿಲ್ಲಾಮಟ್ಟದಲ್ಲಿ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲಾ ಸಮಿತಿಗಳನ್ನು ರಚಿಸಲಾಗುವುದು. ಈ ಎರಡೂ ಸಮಿತಿಗಳಲ್ಲಿ ನಾಡು ನುಡಿಗೆ ಸೇವೆ ಕೈಗೊಳ್ಳುವ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳು, ವಿದ್ವಾಂಸರು, ವಿವಿಧ ರಾಜಕೀಯ ಪಕ್ಷಗಳ ಶಾಸಕರು ಮತ್ತು ಸಂಘ ಸಂಸ್ಥೆಗಳು, ಪತ್ರಿಕಾ ಮಾಧ್ಯಮದ ಪ್ರತಿನಿಧಿಗಳಿರುತ್ತಾರೆ.

7) ಆಡಳಿತ ಕನ್ನಡ ತರಬೇತಿ ಕಾರ್ಯಕ್ರಮಗಳ ಸಂಖ್ಯೆ ಹೆಚ್ಚಿಸುವುದು, ಆಡಳಿತ ಪೂರಕ ಸಾಹಿತ್ಯದ ಪ್ರಕಟಣೆ ಮತ್ತು ಸರಬರಾಜು ಸುವ್ಯವಸ್ಥಿತಗೊಳಿಸುವುದು, ಕಛೇರಿ ಆಧುನೀಕರಣದಲ್ಲಿ ವಿದ್ಯುಚ್ಛಾಲಿತ ಬೆರಳಚ್ಚು ಯಂತ್ರಗಳು - ಇತ್ಯಾದಿಗಳಲ್ಲಿ ಕನ್ನಡವನ್ನು ಅಳವಡಿಸಲು ಯೋಜನೆಯನ್ನು ರೂಪಿಸುವುದು, ಆಗಿಂದಾಗ್ಗೆ ತನಿಖೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಮತ್ತಿತರೆ ಆಡಳಿತ ಭಾಷಾ ನೀತಿಯ ಅನುಷ್ಠಾನಕ್ಕೆ ಪ್ರೇರಕವಾದ ಮತ್ತು ಪೂರಕವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಆಲೋಚಿಲಾಗಿದೆ.

8) ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಲ್ಲಿ ನಾಡಗೀತೆಯನ್ನು ಕಡ್ಡಾಯವಾಗಿ ಹಾಡಬೇಕೆಂದು ಆದೇಶ ನೀಡಲಾಗುವುದು.

ಕನ್ನಡ ಶೀಘ್ರಲಿಪಿಗಾರರು, ಬೆರಳಚ್ಚುಗಾರರ ನೇಮಕ ಮಾಡಲು ಮಿತವ್ಯಯ ಆದೇಶವನ್ನು ಸಡಿಲಿಸಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಹಾಜನ್ ವರದಿಯನ್ನು ಕರ್ನಾಟಕಕ್ಕೆ ಸೇರಲೆಂದು ಶಿಫಾರಸ್ಸು ಮಾಡಿದ ಪ್ರದೇಶಗಳಲ್ಲಿರುವ ಕನ್ನಡಿಗರಿಗೆ ವಿಶೇಷ ಸವಲತ್ತುಗಳನ್ನು ಕೊಡಲು ಕ್ರಮ ಕೈಗೊಳ್ಳಲಾಗುವುದು, ಹೊಸ ವ್ಯವಸ್ಥೆಯನ್ನು ಕೂಡ ಮಾಡಲಾಗುವುದು.

ಶ್ರೀ ಆರ್. ವಿ. ದೇಶಪಾಂಡೆ : ತಮ್ಮ ಹೇಳಿಕೆಯನ್ನು ಸ್ವಾಗತ ಮಾಡುತ್ತೇನೆ. ಕನ್ನಡ ಎಲ್ಲಾ ಹಂತದಲ್ಲಿಯೂ ಪ್ರಾಮಾಣಿಕವಾಗಿ ಜಾರಿಗೆ ತರುವುದಕ್ಕೆ ತಾವು ಪ್ರಯತ್ನ ಮಾಡಿದ್ದೀರಿ. ನಾನು ಇಷ್ಟೇ ಎಚ್ಚರಿಕೆ ಕೊಡುತ್ತಿದ್ದೇನೆ. ಬಹಳಷ್ಟು ಸಾರಿ ಇಂತಹ ಹೇಳಿಕೆಗಳು ಆಗಿದೆ. ಆದರೆ ಅದು ಅನುಷ್ಠಾನದಲ್ಲಿ ಬರುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ನಡೆಯಬೇಕು ಎಂದು ಅಷ್ಟೇ ಹೇಳಿ ನಾನು ತಮ್ಮ ಈ ಹೇಳಿಕೆಯನ್ನು ಸ್ವಾಗತ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ಉದ್ಯೋಗ ಕೊಡುವಾಗ ಕನ್ನಡ ಕಲಿಯಬೇಕು ಎಂದು ತಾವು ಹೇಳಿದ್ದೀರಿ. ತಮ್ಮ ಕಳಕಳಿ ಮೆಚ್ಚಿ ಸಂತೋಷಪಡುತ್ತೇನೆ. ನಾನು ಒಂದು ಸಾರಿ ಏಕೆ 101 ಸಾರಿ ಅಭಿನಂದಿಸುತ್ತೇನೆ. ಅದು ಬೇರೆ ಪ್ರಶ್ನೆ. ಆದರೆ ನಾನು ತಮಗೆ ಹೇಳುವುದು, ಒಂದು ಉದ್ಯೋಗಕ್ಕೆ ಬರಕ್ಕವರು ಯಾರು ಇದ್ದಾರೆ, ಉದ್ಯೋಗಕ್ಕೆ ಸೇರತಕ್ಕವರು 100ಕ್ಕೆ 100 ಕನ್ನಡ ಬರೆಯತಕ್ಕದ್ದು,

ಕನ್ನಡ ಓದತಕ್ಕದ್ದು ಕಡ್ಡಾಯವಾಗಿ ಇರಬೇಕು. ಉದ್ಯೋಗಕ್ಕೆ ಬಂದ ಮೇಲೆ ಕನ್ನಡ ಕಲಿಯಬೇಕು ಎಂದು ಹೇಳತಕ್ಕ ಸರ್ಕಾರಿ ಆಜ್ಞೆ ಇದೆ. ಉದ್ಯೋಗಕ್ಕೆ ಬಂದ ನಂತರ ಆಮೇಲೆ ಎರಡು ತಿಂಗಳು, ಮೂರು ತಿಂಗಳೊಳಗೆ ಕನ್ನಡ ಕಲಿಸುತ್ತೇವೆ ಎಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರೇ, ದಯಮಾಡಿ ತಾವು ಮೊದಲೇ ಸರ್ಕಾರಿ ಹುದ್ದೆಗೆ ಯಾರಾದರು ಬರಬೇಕಂದಿದ್ದರೆ, ಅವರು ಕನ್ನಡವನ್ನು ಕಡ್ಡಾಯವಾಗಿ ಕಲಿತಿರಬೇಕು ಎಂದು ನಿಯಮ ಮಾಡಿ; ಇದು ಒಂದು. ಎರಡನೆಯದು ಈ ಸರೋಜಿನಿ ಮಹಿಷಿ ವರದಿ, ಇದು ಯಾವುದೋ ಸುಮಾರು ತಾತನ ಕಾಲದ್ದು. ಓಬಿರಾಯನ ಕಾಲದಲ್ಲಿ ಈ ತರಹ 12 ಉಪ ಸಮಿತಿಗಳು ಆಗಿವೆ. ಹಿಂದಿನ ಸರ್ಕಾರ ಮೂರು ಉಪ ಸಮಿತಿಗಳನ್ನು ಮಾಡಿತ್ತು;

ಶ್ರೀಮತಿ ಮೋಟಮ್ಮ : ಉನ್ನತ ಮಟ್ಟದ ಸಮಿತಿ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸರೋಜಿನಿ ಮಹಿಷಿ ವರದಿ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೀರಿ; ಅದನ್ನು ಮೆಚ್ಚುತ್ತೇನೆ, 100ಕ್ಕೆ 100 ಸಂತೋಷಪಡುತ್ತೇನೆ. ಆ ಸಮಿತಿ ಚುರುಕಾಗಿ ಇರಬೇಕು ಮತ್ತು ರಾಜ್ಯದ ಉದ್ದಗಲಕ್ಕೂ ಕೆಲಸ ಮಾಡಬೇಕು. ಇದು ಒಂದು. ಈ ಸರೋಜಿನಿ ಮಹಿಷಿ ವರದಿಯನ್ನು ಎಷ್ಟು ಸಾರಿ ಉಪ ಸಮಿತಿಗೆ ಕೊಡುತ್ತಿದ್ದೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಸ್ಥಾಯಿ ಸಮಿತಿಯನ್ನು ಎಷ್ಟರಮಟ್ಟಿಗೆ ಅನುಷ್ಠಾನ ಆಗಿದೆ, ಎಂದು ಮಾನಿಟರ್ ಮಾಡುವುದಕ್ಕೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಹೇಳುತ್ತೇನೆ. ಇಂತಹ ಸಮಿತಿ ಮಾಡಿ, ವರದಿ ಕೊಡಿ ಎಂದು ಸರೋಜಿನಿ ಮಹಿಷಿ ಆಯೋಗವನ್ನು ನೇಮಕ ಮಾಡಿ. ಆ ಒಂದು ಸಮಿತಿ ತನ್ನ ವರದಿ ಕೊಟ್ಟ ನಂತರ ಉಪ ಸಮಿತಿ ಬಂದಿತ್ತು. ಈಗ ಅದನ್ನು ನೋಡುವುದಕ್ಕೆ ನೀವು ಮತ್ತೊಂದು ಉಪ ಸಮಿತಿ ಮಾಡುವುದಾದರೆ, ಈ ಸಮಿತಿಯ ಕೆಲಸ ಕಾರ್ಯಗಳು ಸಂಪೂರ್ಣವಾಗಿ ಆಗುವುದಿಲ್ಲ; ಇದು ನನ್ನ ಸ್ಪಷ್ಟವಾದ ಅಭಿಪ್ರಾಯ ಇನ್ನೂ ಅನೇಕ ನ್ಯೂನತೆಗಳಿವೆ. ಮೂರು ಪುಟಗಳಲ್ಲಿ ಸಮಗ್ರವಾಗಿ ತಾವೇನು ಹೇಳಿದ್ದೀರಿ ಆ ಬಗ್ಗೆ ನಾನು ನಿಜವಾಗಿ ಹೇಳುತ್ತಿದ್ದೇನೆ; ನೀವು ಇದನ್ನು ಮಾಡುವುದಕ್ಕೆ ಇನ್ನೊಂದು ಯೋಜನೆ ಬೇಕು. ಕನ್ನಡವನ್ನು ಈ ರಾಜ್ಯದಲ್ಲಿ ಆಡಳಿತ ಭಾಷೆಯನ್ನಾಗಿ ಅನುಷ್ಠಾನಗೊಳಿಸುವುದಕ್ಕೆ ಒಂದು ಸಮಗ್ರವಾದಂಥ ಯೋಜನೆ ಸಿದ್ಧವಾಗಬೇಕು, ಅಲ್ಲದೆ, ಈ ಯೋಜನೆ ಪರಿಣಾಮಕಾರಿಯಾಗಿರಬೇಕು. ಈಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೆ. ಆ ಇಲಾಖೆಗೆ ನೀವು ಎಷ್ಟು ಹಣ ಒದಗಿಸಿದ್ದೀರಿ? ಆ ಇಲಾಖೆಯಲ್ಲಿ ದುಡ್ಡಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನಾಟಕವಾಡುವವರಿಗೆ ಅಥವಾ ನರ್ತನ ಮಾಡುವವರಿಗೆ ಕೊಡುವ ಒಂದಿಷ್ಟು ದುಡ್ಡು ಬಿಟ್ಟರೆ ಮಿಕ್ಕ ದುಡ್ಡು ಇದೆಯೇ? ಏತಕ್ಕೆ ಹೀಗೆ ಒದ್ದಾಡುತ್ತಿದ್ದೀರಿ; ಧೈರ್ಯವಾಗಿ ಹೇಳಿ. ನೀವು ಸುಮ್ಮನೆ ಮೌನವಾಗಿ ಕುಳಿತರೆ ನಾನೇನು ಹೇಳಲಿ? ದಯಮಾಡಿ ನೀವು ಈ ಇಲಾಖೆಗೆ

ಶಕ್ತಿ ಕೊಡಬೇಕು; ಈ ಇಲಾಖೆಗೆ ಹೆಚ್ಚಿನ ಹಣ ಕೊಡಬೇಕು. ಈ ಇಲಾಖೆಯನ್ನು ಸಚಿವ ಸಂಪುಟ ದರ್ಜೆಗೇರಿಸಬೇಕೆಂದು ನಾನು ಮೊದಲೇ ಹೇಳಿದ್ದೇನೆ. ಈ ಇಲಾಖೆಯನ್ನು ನೀವು ಮುನಿಸಿಪಾಲಿಟಿ ಕಸದ ತೊಟ್ಟಿಯಂತೆ ಮಾಡಿದ್ದೀರಿ. ಮತ್ತೆ ನಾನು ಪ್ರೊ: ನಂಜುಂಡಸ್ವಾಮಿಯವರು ಹಾಗೂ ಬಾಬಾಗೌಡರು ಸೇರಿಕೊಂಡು ವಿಧಾನಸೌಧದ ಮೂರನೇ ಮಹಡಿಯಿಂದ ಕೆಳಗಿನ ಮಹಡಿವರೆಗೆ ಇರುವ ಎಲ್ಲಾ ಕೊಠಡಿಗಳ ಆಂಗ್ಲ ಭಾಷಾ ನಾಮಫಲಕಕ್ಕೆ ಡಾಂಬರ್ ಬಳಿದೆವು. ಇದರ ಬಗ್ಗೆ ನಿಮ್ಮ ಸರ್ಕಾರದ ನಿರ್ಧಾರವೇನು? ಮಾನ್ಯ ಮುಖ್ಯಮಂತ್ರಿಗಳೇ, ನಾನು ಅನೇಕ ವಿಚಾರಗಳನ್ನು ಹೇಳಿದೆ, ಅದು ತಮ್ಮ ಗಮನಕ್ಕೆ ಬಂತೋ ಏನೋ ಗೊತ್ತಿಲ್ಲ. ತಾವು ಹಿರಿಯ ಸಚಿವರ ಜೊತೆ ಏನೋ ಚರ್ಚೆ ಮಾಡುತ್ತಿದ್ದು, ನಾನು ಹೇಳಿದ್ದು ಏನೆಂದು ತಮಗೆ ಗೊತ್ತಾಗಲಿಲ್ಲ. ತಾವು ನನ್ನತ್ತ ಗಮನಹರಿಸಿದರೆ, ಕನ್ನಡವನ್ನು ಸಮಗ್ರವಾಗಿ ಜಾರಿಗೆ ತರುವ ಬಗ್ಗೆ ಎರಡು ನಿಮಿಷಗಳಲ್ಲಿ ಹೇಳಿ. ಸಂಸ್ಕೃತಿ ಇಲಾಖೆ ಇದೆಯೆಲ್ಲಾ, ಇದಕ್ಕೆ ಹೆಚ್ಚಿನ ಚೈತನ್ಯ ಕೊಡಬೇಕು ಅಲ್ಲದೆ, ಈ ಇಲಾಖೆಯನ್ನು ಸಚಿವ ಸಂಪುಟದ ದರ್ಜೆಗೇರಿಸಬೇಕು. ಇದನ್ನು ನಾನು ಮೊದಲೇ ಹೇಳಿದೆ. ಏಕೆಂದರೆ, ಅದಕ್ಕೆ ಈ ರಾಜ್ಯದಲ್ಲಿ ಒಂದು ಶಕ್ತಿ ಬರಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂದರೆ ಯಾವುದೋ ಒಂದು ಮುನಿಸಿಪಾಲಿಟಿ ಕಸದ ತೊಟ್ಟಿಯಂತಿರಬಾರದೆಂದು ಹೇಳಿದೆ. ಇದು ತಮ್ಮ ಗಮನಕ್ಕೆ ಬರಬೇಕು. ತಮಗೆ ಕನ್ನಡದ ಬಗ್ಗೆ ಕಾಳಜಿ ಮತ್ತು ಅಭಿಮಾನ ಇದೆ, ಅದನ್ನು ನಾನು ಒಪ್ಪುತ್ತೇನೆ. ಈಗ ತಮ್ಮ ಮೂರು ಪುಟಗಳ ಭಾಷಣದಲ್ಲಿ ಏನು ಹೇಳಿದ್ದೀರಿ, ಅದಕ್ಕೆ ಇನ್ನೂ ಹೆಚ್ಚಿನ ಶಕ್ತಿ ಬರಬೇಕು. ಏಕೆಂದರೆ ಇಷ್ಟು ಧೈರ್ಯವಾಗಿ ನೀವು ಸ್ವಲ್ಪ ಮುಂದಕ್ಕೆ ಬಂದ್ರಲ್ಲಾ, ಅದನ್ನು ನಾನು ಮೆಚ್ಚುತ್ತೇನೆ. ಇದಕ್ಕೊಂದು ಯೋಜನೆಯಾಗಬೇಕು. ಈ ವರ್ಷದಲ್ಲಿ ನಾವು ಇಷ್ಟನ್ನು ಖಂಡಿತವಾಗಿ ಕಡ್ಡಾಯವಾಗಿ ಮಾಡುತ್ತೇವೆ ಎಂದು ಹೇಳಬೇಕು. ನಾವು ಮೊನ್ನೆ ದಿವಸ ತಮ್ಮ ಕಛೇರಿಯ ಆಂಗ್ಲ ನಾಮಫಲಕವೂ ಸೇರಿದಂತೆ ಅನೇಕ ಇತರ ಆಂಗ್ಲ ನಾಮಫಲಕಗಳಿಗೂ ಏನು ಡಾಂಬರ್ ಬಳಿದಿದ್ದೇವೆ, ಇದಕ್ಕೆ ತಾವು ಒಂದು ಆಜ್ಞೆ ಮಾಡಬೇಕು. ಎಲ್ಲಾ ನಾಮಫಲಕಗಳೂ ಸಂಪೂರ್ಣವಾಗಿ ಕನ್ನಡದಲ್ಲಿಯೇ ಇರಬೇಕೆನ್ನತಕ್ಕ ಆಜ್ಞೆಯನ್ನು ತಾವು ಹೊರಡಿಸಬೇಕು. ಆಗ ಅದಕ್ಕೊಂದು ರೂಪ ಬರುತ್ತದೆ. ವಿಧಾನ ಸೌಧದಿಂದಲೇ ಕನ್ನಡದ ಅನುಷ್ಠಾನವಾಗಬೇಕೆಂದು ಹೇಳುವುದಾದರೆ ವಿಧಾನಸೌಧದ ಮೂರನೇ ಮಹಡಿಯಿಂದ ಪಂಚಾಯಿತಿವರೆಗೂ ಕನ್ನಡ ಜಾರಿಗೆ ಬರಬೇಕು ಎಂದರೆ ತಾನೇ ಜಾರಿಗೆ ಬರುವುದು. ಇದು ಇಲ್ಲವೆಂದರೆ ಬೇರೆ ಹೇಗೆ ಬರುತ್ತದೆ? ಆದುದರಿಂದ, ತಾವು ಹೇಳಬೇಕು. ಏನೆಂದರೆ, 'ಯಾರು ಕಡ್ಡಾಯವಾಗಿ ಕನ್ನಡದಲ್ಲಿ ಕೆಲಸ ಮಾಡದಿರತಕ್ಕಂಥ ಐಎಎಸ್ ಅಧಿಕಾರಿಗಳಾಗಲಿ, ಐಪಿಎಸ್ ಅಧಿಕಾರಿಗಳಾಗಲಿ, ಅವರನ್ನು ಮತ್ತೆ ಕೇಂದ್ರಕ್ಕೆ ಕಳುಹಿಸತಕ್ಕಂಥ' ವ್ಯವಸ್ಥೆ ಮಾಡಲಾಗುವುದು'ಎಂದು. ಯಾವ ಐಎಎಸ್ ಅಧಿಕಾರಿಗಳಿಗೆ,ಮತ್ತು ಐಪಿಎಸ್ ಅಧಿಕಾರಿಗಳಿಗೆ ಕನ್ನಡದ ಬಗ್ಗೆ ಕೆಲಸ ಮಾಡುವುದಿಲ್ಲವೋ ಅಂತಹವರನ್ನು ನೀವು ಗಂಭೀರವಾಗಿ, ಗೌರವವಾಗಿ ಒಂದು ಸನ್ಮಾನ ಮಾಡಿ ಕೇಂದ್ರಕ್ಕೆ ಕಳುಹಿಸತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು. ಏಕೆಂದರೆ, ನಿಮ್ಮ ಸುತ್ತಮುತ್ತ ಕೆಲಸ ಮಾಡತಕ್ಕಂಥವರು ಇಂತಹ ಅಧಿಕಾರಿಗಳು ತಾನೇ? ಅಧಿಕಾರಿಗಳ ಮಟ್ಟದಲ್ಲಿ ಈ ವ್ಯವಸ್ಥೆಯಾಗಲಿಲ್ಲವೆಂದರೆ ಇನ್ನೆಲ್ಲಿ ಆಗುತ್ತದೆ? ಕನ್ನಡದ ಮಾಧ್ಯಮದ ಬಗ್ಗೆ ಸರ್ಕಾರದ ಒಂದು ಸಮಗ್ರ ಚಿಂತನೆಯಾಗಬೇಕು.

ಅದರ ಬಗ್ಗೆ ಒಂದು ನೀತಿ ಇಲ್ಲ. ನಮ್ಮ ರಾಜ್ಯದಲ್ಲಿ ಯಾವ ಭಾಷೆಗೂ ನೀತಿ ಎಂಬುದಿಲ್ಲ. ಅದರಲ್ಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ನೀತಿ ಇಲ್ಲ. ಎಲ್ಲಾ ಇಲಾಖೆಗಳಿಗಿರುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೂ ಒಂದು ನೀತಿ ಬೇಕಲ್ಲ, ಆದರೆ ಆ ನೀತಿ ಎಂಬುದಿಲ್ಲ. ಆದುದರಿಂದ, ನನಗೆ ನೀವೇನು ಸಹಕಾರ ಕೊಡಬೇಡಿ, ನನಗೆ ಅದು ಬೇಕಾಗಿಲ್ಲ. ತಾವು ಒಪ್ಪುವುದಾದರೆ ಕನ್ನಡದ ಅಭಿವೃದ್ಧಿ ಬಗ್ಗೆ ಏನೇನು ಮಾಡಬೇಕೆಂಬುದರ ಬಗ್ಗೆ ನಾನೊಂದು ವರದಿ ಕೊಡುತ್ತೇನೆ. ತಾವು ದಯಮಾಡಿ ಏನಾದರೂ ನನಗೆ ಆ ವರದಿ ಕೊಡಿ ಎಂದು ಕೇಳುವುದಾದರೆ ನಾನು ಕೊಡುತ್ತೇನೆ. ನಾನು ಸಂಪೂರ್ಣವಾಗಿ, ಸಮಗ್ರವಾಗಿ ಕನ್ನಡದ ಬೆಳವಣಿಗೆ ಬಗ್ಗೆ, ಕನ್ನಡ ನಾಡಿನ ಅಭ್ಯುದಯದ ಬಗ್ಗೆ, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಬಗ್ಗೆ ಒಂದು ನೀತಿಯಿಟ್ಟುಕೊಂಡು ಒಂದು ಚೌಕಟ್ಟಿನಲ್ಲಿ ತಯಾರಿಸಿರುವ ವರದಿಯನ್ನು ನಿಮಗೆ ಕೊಡುತ್ತೇನೆ. ಆ ವರದಿಯಲ್ಲಿರುವಂತೆ ತಾವು ಚಾಚೂ ತಪ್ಪದೆ ಜಾರಿಗೆ ತರಬೇಕು. ಇಲ್ಲದಿದ್ದರೆ, ತಾವು ಏನು ಒಂದು ಘನವಾದ ಉದ್ದೇಶವಿಟ್ಟುಕೊಂಡು ಇದನ್ನೆಲ್ಲಾ ಮಾಡುವುದಕ್ಕೆ ಹೊರಟಿದ್ದೀರಿ, ಅದಕ್ಕೆ ಭಂಗ ಬರುತ್ತದೆ. ಆದುದರಿಂದ, ಇದಕ್ಕೆ ತಾವು ಪ್ರಾಮಾಣಿಕವಾಗಿ ಕಾಲಿಡಬೇಕು ಎನ್ನತಕ್ಕಂಥಾದ್ದು ಮತ್ತು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಏನೊಂದು ಸಮಿತಿ ಮಾಡುತ್ತಿದ್ದೀರಿ, ಈ ಸಮಿತಿ ವರ್ಷಕ್ಕೊಂದು ಸಾರಿ ಸೇರತಕ್ಕಂಥಾದ್ದಲ್ಲ, ಇದು ಕನಿಷ್ಠ ತಿಂಗಳಿಗೆ ಒಂದು ಬಾರಿಯಾದರೂ ಸೇರಿ ಯಾವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆನ್ನುವುದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕನ್ನಡದ ಬಗ್ಗೆ ವಿಶೇಷವಾದಂಥ ಚಿಂತೆ ಇರತಕ್ಕಂಥವರು.....

SRI B. I. PATIL : I want to speak.

SRI M. VEERAPPA MOILY : You want to speak on Kannada.

SRI B. I. PATIL : I will speak in Marathi. I do not know Kannada. Speaker Sir, it has been announced by the chief Minister that will be 100% Kannada at all levels of administration from the 1st April 1993. We do not object for the said policy. But at the same time the minorities and other non-Kannadigas Who also from the sizeable population in the society should not be put to hardship.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಕನ್ನಡ ಗೊತ್ತಿದೆ, ಇಲ್ಲಿ ಬಂದು ನಾಟಕವಾಡುತ್ತಿದ್ದಾರೆ. ಅವರಿಗೂ ಚಿಂತೆ ಪಡಬೇಕಾಗಿಲ್ಲ. ಏನಿದ್ದರೂ ಕನ್ನಡದ ಬಗ್ಗೆ ಹೇಳಬೇಕು, ಅದನ್ನು ಬಿಟ್ಟು ಇವರು ದಾರಿ ತಪ್ಪುತ್ತಿದ್ದಾರೆ.

SRI B.I. PATIL : I have a right to speak. It has been our experience whenever we rise to speak on the floor of the House, invariably there have been hurdles to us from some hon.members. It is our right and privilege to speak in English the language which we know. Recently the Commissioner for Minorities, Governmnet of India, has said that.

(Interruptions)

ಶ್ರೀ ವಾಟಾಳ್ ನಾಗರಾಜ್ : ಇವರು ಹೇಳುವುದೆಲ್ಲಾ ಬರೀ ಬುರುಡೆ, ಬರೀ ಬೋಗಸ್. ಯಾರೂ ಕೂಡ ಇದನ್ನು ಒಪ್ಪಬೇಕಾಗಿಲ್ಲ.

SRI B. I. PATIL : Wherever there are minority population, circular, Government orders and other administrative communications should be sent in those minority languages.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬರೆದುಕೊಂಡು ಓದುತ್ತಿದ್ದಾರೆ. ಈ ಸದನದಲ್ಲಿ ಬರೆದುಕೊಂಡು ಓದುವುದಕ್ಕೆ ಅವಕಾಶವಿಲ್ಲ. ಇದು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಕನ್ನಡಕ್ಕೆ ಮಾಡತಕ್ಕಂಥ ದ್ರೋಹವೇ ಹೊರತು ಮತ್ತೇನೂ ಅಲ್ಲ. ಇದು ಸರಿಯಲ್ಲ.

SRI B. I. PATIL : Where there is 50% minority population, you must send circular in the same language. Therefore I request the Government to allow to speak and send circulars in Marathi or other languages. Because 15% of the Karnataka population is comprising of other languages people.

ಶ್ರೀ ಕೆ. ಹರ್ಷಕುಮಾರಗೌಡ : ಕನ್ನಡದ ಜನರು ಕೊಡುವ ದುಡ್ಡಿನಲ್ಲಿ ಇವ್ರೊತ್ತು ಟಿವಿ, ಡಿವಿ ಸಂಬಳ ತೆಗೆದುಕೊಳ್ಳುವುದು, ಇಲ್ಲಿಗೆ ಬಂದು ಇಂಗ್ಲಿಷಿನಲ್ಲಿ ಮಾತನಾಡೋದು. ಇಂತಹವರಿಗೆ ನೀವು ಹೇಗೆ ಅಲೋ ಮಾಡುತ್ತೀರಿ? You have been paid by the people of Karnataka.

ಶ್ರೀ ಬಸವರಾಜ ರಾಯರೆಡ್ಡಿ : ಅವರಿಗೆ ಕನ್ನಡ ಬರುತ್ತದೋ, ಇಲ್ಲವೋ ಬೇರೆ ಮಾತು. ಆದರೆ, ಇವರು ಇಂಗ್ಲೀಷನ್ನು ಕೊಲ್ಲುತ್ತಿದ್ದಾರೆ. ಯಾರಾದರೂ ಅವರ ಇಂಗ್ಲೀಷನ್ನು ಕೇಳಿದರೆ ಬಹಳ ಕಷ್ಟವಾಗುತ್ತದೆ.

SRI MODGEKAR DESAI : We are residing in border area. Our mother tongue is Marathi.

ಶ್ರೀ ಕೆ. ಹರ್ಷಕುಮಾರಗೌಡ : ಅವರು ಕನ್ನಡದಲ್ಲಿ ಓದಲಿ.

SRI MODGEKAR DESAI : We have to consider the integrity of the nation, We are also the citizens of India. You have to allow us to talk in Hindi.

ಶ್ರೀ ವಾಟಾಳ್ ನಾಗರಾಜ್ : ಇದು 'ಕರ್ನಾಟಕ ರಾಜ್ಯ' ಎಂದು ತಿಳಿದುಕೊಳ್ಳಬೇಕು, ಇದು ಮಹಾರಾಷ್ಟ್ರವಲ್ಲ. ಅವರು ಹೊರಗಡೆ ಚೆನ್ನಾಗಿ ಕನ್ನಡ ಮಾತನಾಡುತ್ತಾರೆ, ಇಲ್ಲಿಗೆ ಬಂದು ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ, ಇಲ್ಲಿಗೆ ಬಂದು ಇಂಗ್ಲೀಷಿನಲ್ಲಿ ಮಾತನಾಡ ತಕ್ಕಂಥಾದ್ದು ಏನು?

SRI B.I. PATIL : I am fighting for this. I have got right. Our people have voted and sent here.

ಶ್ರೀ. ವಾಟಾಳ್ ನಾಗರಾಜ್ : ಇವರಿಗೆ ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಕನ್ನಡ ಬರುತ್ತದೆ. ಆದರೂ, ಇಲ್ಲ ಅವರದೊಂದು ಸೋಗು, ನಾಟಕ.

ಶ್ರೀ ಕೆ. ಹರ್ಷಕುಮಾರಗೌಡ : ಅವರಿಗೆ ಕನ್ನಡವೂ ಬರುವುದಿಲ್ಲ, ಇಂಗ್ಲೀಷೂ ಬರುವುದಿಲ್ಲ, ಆದರೂ ಏಕೆ ಮಾತನಾಡುತ್ತಿದ್ದಾರೆ?

SRI B. I. PATIL : If you are not giving protection, I will walk out sir.

(Interruptions)

SRI B.I. PATIL: I will also put Marathi and English Boards in Belgaum.

5.55 ಪಿ. ಎಂ.
(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕನ್ನಡದಲ್ಲಿ ಮಾತನಾಡುತ್ತಾರೆ. ಎಲ್ಲಾ ಮರಾಠಿ ಎಂದು ಹೇಳುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಬಹಳ ಸಂತೋಷ ಮಾನ್ಯ ವಾಟಾಳ್ ನಾಗರಾಜ್ ರವರು ತಾವೇ ಒಂದು ವರದಿಯನ್ನು ಕೊಡುತ್ತೇವೆಂದು ಹೇಳಿದರು. ಅದಕ್ಕೆ ಸ್ವಾಗತ. ತಾವು ವರದಿ ಕೊಟ್ಟದ್ದನ್ನು ನಾವು ಸ್ವೀಕಾರ ಮಾಡುತ್ತೇವೆ. ಕನ್ನಡದಲ್ಲಿ ಬಹಳ ಒಳ್ಳೆಯ ಹಿತಚಿಂತನೆಯನ್ನು ಇಟ್ಟುಕೊಂಡಿರತಕ್ಕಂತಹವರು ತಾವು ಬಹಳ ಸ್ವಾಗತ. ಬಿ.ಐ. ಪಾಟೀಲ್ ಅವರು ಮಾತನಾಡುತ್ತಾ ಕನ್ನಡ ಆಡಳಿತ ಭಾಷೆ ಆದರೂ ಅದರ ಮೇಲೆ ಒಪ್ಪಂದ ಯಾರ ಮೇಲೆ ಯಾರಿಗೂ ಇಲ್ಲವೆಂದು ಹೇಳಿದರು. ಆದರೆ ಆಡಳಿತ ಭಾಷೆ ಕನ್ನಡ ಇದೆ. ಆಮೇಲೆ ಸಂವಿಧಾನದ ಪ್ರಕಾರ ಅಲ್ಪಸಂಖ್ಯಾತರ ಭಾಷೆಗಳಿಗೆ ಹಾಗೂ ಅಲ್ಪಸಂಖ್ಯಾತರಿಗೆ ಏನು ರಕ್ಷಣೆ ಕೊಡಬೇಕೋ ಅದನ್ನು ಕೊಟ್ಟೇ ಕೊಡುತ್ತೇವೆ. There is no compromise on that also. There are two or three small statements to make. ಇನ್ನೂ ಪ್ರವಾಹದ ಸಂದರ್ಭದಲ್ಲಿ ಏನಾಗಿದೆ ಎಂದರೆ ಮುಖ್ಯವಾಗಿ ರಾಯಚೂರು ಧಾರವಾಡ ಬಳ್ಳಾರಿ ಚಿತ್ರದುರ್ಗಗಳಲ್ಲಿ ಕುರಿಗಳ ಹಿಂಡುಗಳು ನಾಪತ್ತೆಯಾಗಿದೆ. ಸಾಕಷ್ಟು ಪರಿಹಾರ ಕೂಡ ಕೊಟ್ಟಿದ್ದೇವೆ. ಆದರೂ ಕೂಡ ಕೆಲವರಿಗೆ ಸಿಕ್ಕಲಿಲ್ಲವೆನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಈಗ ಇಲ್ಲಿಗೆ ನಮಗೆ ಬಂದ ವರದಿ ಪ್ರಕಾರ ಡಿಸ್ಟ್ರಿಬ್ಯೂಷನ್ ಮಾಡಿದ್ದೇವೆ. ಆದರೆ ಕೆಲವು ಕಡೆ ದೂರುಗಳಿರುವುದರಿಂದ ರಾಯಚೂರು ಜಿಲ್ಲೆಗೆ 10 ಲಕ್ಷ ರೂಪಾಯಿ ಬಳ್ಳಾರಿಗೆ 5 ಲಕ್ಷ, ಚಿತ್ರದುರ್ಗಕ್ಕೆ 5 ಲಕ್ಷ ಧಾರವಾಡಕ್ಕೆ 5 ಲಕ್ಷ ರೂಪಾಯಿ ಎಂದು ಆಯಾ ಜಿಲ್ಲೆಯ ಡಿ.ಸಿ.ಗಳಿಗೆ ಆ ಫಂಡ್ ಕೊಟ್ಟಿದ್ದೇವೆ. ಇಂತಹ ಕುರಿ ಹಿಂಡುಗಳು ನಾಪತ್ತೆಯಾಗಿವೆ, ಪ್ರವಾಹದಲ್ಲಿ ನಾಪತ್ತೆ ಯಾಗಿದೆಯೆಂಬ ದೂರುಗಳು ಬಂದಿವೆ. These are the reports we have. ಅವರಿಗೆ ಪರಿಹಾರ ಕೊಡಬೇಕೆಂದು ತಿಳಿಸಿದ್ದೇವೆ. ಅದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಫಂಡನ್ನು ಒದಗಿಸುತ್ತಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ಬಹಳ ಸಂತೋಷ. ಒಳ್ಳೆ ಕೆಲಸ ಮಾಡಿದ್ದೀರಿ; ನಾರ್ತ್ ಕೆನರಾದಲ್ಲಿ, ಮುಂಡಗೋಡದಲ್ಲಿ ಆಗಿದೆ. ಅವರು ನಮ್ಮ ಜಿಲ್ಲೆಯವರಲ್ಲ. ಬೆಳಗಾಂ ಜಿಲ್ಲೆ, ಬಿಜಾಪುರ ಜಿಲ್ಲೆಯಿಂದ ಬಂದಂತಹ ಜನ. ಅಲ್ಲಿ ಅವರ ಹಸುಗಳು ಕೊಚ್ಚಿ ಕೊಂಡು ಹೋಗಿವೆ. ಅಲ್ಲೂ ಕೂಡ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕು. ತಾವು ಹಣ ಕೊಡುತ್ತೇವೆಂದು ಹೇಳುತ್ತಿದ್ದೀರಿ. ನಿನ್ನೆ ಮಾನ್ಯ ಕಂದಾಯ ಮಂತ್ರಿಗಳ ಒಂದು ಹೇಳಿಕೆ ಪತ್ರಿಕೆಯಲ್ಲಿ ಬಂದಿತ್ತು. ಅದನ್ನು ನೋಡಿದೆ. 7-8 ಲಕ್ಷ ರೂಪಾಯಿ ರಿಲೀಸ್ ಮಾಡಿದೆ

ಎಂದು ಹೇಳಿದ್ದಾರೆ. ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದಾರೆಂದು ತಿಳಿದುಕೊಳ್ಳೋಣವೆಂದು ನಾನು ಕಂದಾಯ ಕಮಿಷನರ್ ಅನ್ನು ಕಾಂಟಾಕ್ಟ್ ಮಾಡಿದೆ. ಅವರು ಹೇಳಿದರು we could not issue copy of the order because the Finance Department has told us not to clear it, ಎಂದು. ಮಾನ್ಯ ಕಂದಾಯ ಸಚಿವರು ಮೇಲ್ಮನೆಯಲ್ಲಿ ಮೊನ್ನೆ 7-8 ಲಕ್ಷ ರೂಪಾಯಿ ನಾನು ರಿಲೀಸ್ ಮಾಡಿದ್ದೇನೆಂದು ಹೇಳಿಕೆ ಮಾಡಿದರು. ರಿಲೀಸ್ ಆಗಿರಬಹುದೆಂದು ನಮ್ಮ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆ, ರಾಜ್ಯದಲ್ಲಿ ಎಲ್ಲೆಲ್ಲಿ ಏನೇನು ಕೊಟ್ಟಿದ್ದಾರೆಂದು ನೋಡಲಿಕ್ಕೆ ನಾನು ಕಂದಾಯ ಕಮಿಷನರ್ ಅನ್ನು ಕಂಟ್ಯಾಕ್ಟ್ ಮಾಡಿದೆ. ಆದರೆ ಹಣಕಾಸು ಇಲಾಖೆಯವರು ಆರ್ಡರ್ ಇಷ್ಯೂ ಮಾಡಬಾರದೆಂದು ಹೇಳಿದ್ದಾರೆ ಎಂದು ಅವರು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳೇ, ತಾವು ಇದರ ಬಗ್ಗೆ ಗಮನ ಹರಿಸಬೇಕು. ಮಾಡಬಾರದೆಂದು ಹೇಳಿದ್ದಾರೆ ಹಾಗಾಗಿ ತಡೆಯಾಜ್ಞೆಯಾಗಿದೆ ಎಂದು ಹೇಳಿದರು. ಹಾಗಾಗಬಾರದು. ಹಣಕಾಸು ಇಲಾಖೆಯಿಂದ ಇದಕ್ಕೆ ಒಪ್ಪಿಗೆ ಕೊಟ್ಟು ರಿಲೀಸ್ ಮಾಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತಂದಿದ್ದೆ. ನನ್ನ ಮತ ಕ್ಷೇತ್ರವಾದ ಹಿರೇಕೆರೂರು ತಾಲ್ಲೂಕಿನ ಮದಗಮಾಸೂರು ಕೆರೆಯ ನವೀಕರಣ ಹಾಗೂ ಕಾಲುವೆ ದುರಸ್ತಿಗಾಗಿ ಎನ್. ಡಬ್ಲು. ಎಂ. ಪಿ. ಯೋಜನೆಯಲ್ಲಿ, ರಾಷ್ಟ್ರೀಯ ನೀರು ನಿರ್ವಹಣಾ ಯೋಜನೆ ಅಡಿಯಲ್ಲಿ ಆ ಒಂದು ಯೋಜನೆಯನ್ನು ಕೇಂದ್ರ ಸರಕಾರ ಡಿಸೆಂಬರ್ ತಿಂಗಳಲ್ಲಿ ಮಂಜೂರು ಮಾಡಿದೆ. ಅದರ ಕೆಲಸ ಪ್ರಾರಂಭ ಮಾಡಬೇಕು, ನಿಗದಿತ ಅವಧಿಯಲ್ಲಿ ಇದನ್ನು ಮಾಡಬೇಕೆಂದು ಕೇಂದ್ರ ಸರಕಾರ ಕರಾರು ಹಾಕಿದೆ. ರಾಜ್ಯ ಸರಕಾರ ಹಣವನ್ನು ಬಿಡುಗಡೆ ಮಾಡಬೇಕು ಆ ಕೆಲಸವನ್ನು ಪ್ರಾರಂಭ ಮಾಡಬೇಕು ಮತ್ತೆ ರಾಜ್ಯ ಸರಕಾರಕ್ಕೆ ಹಣವನ್ನು ರೀ-ಇಂಬರ್ಸ್ ಮಾಡುತ್ತಿದ್ದಾರೆ. ಇಷ್ಟು ಇದ್ದರೂ ಸಹ ಅಲ್ಲಿ ಕೆಲಸ ಪ್ರಾರಂಭವಾಗಿಲ್ಲ, ಹಣ ಬಿಡುಗಡೆಯಾಗಿಲ್ಲ. ಆ ಕೆಲಸ ಮಾಡಿದ್ದರೆ ಸಾವಿರಾರು ಎಕರೆ ಬೆಳೆಗೆ ನೀರನ್ನು ಕೊಡಬಹುದಾಗಿತ್ತು. ರೈತರ ಭೂಮಿಗೆ ನೀರು ಸಿಗದೆ ರೈತರು ಈಗ ಧರಣಿ ಮಾಡುತ್ತಿದ್ದಾರೆ. ರೈತರು ಇವತ್ತು ಆಕ್ರೋಷಕ್ಕೆ ಒಳಪಟ್ಟಿದ್ದಾರೆ. ಈ ಕಾರಣದಿಂದಾಗಿ ಸಂಬಂಧಪಟ್ಟ ನೀರಾವರಿ ಮಂತ್ರಿಗಳಿಗೆ ಈ ಸಮಸ್ಯೆಯನ್ನು ತಿಳಿಸಿದ್ದೇವೆ. ನೀರಾವರಿ ಇಲಾಖಾ ಕಾರ್ಯದರ್ಶಿಯವರಿಗೆ ಮತ್ತು ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಿಗೆ ಸಹ ಪತ್ರವನ್ನು ಕೊಟ್ಟು ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ತಿಳಿಸಿದ್ದೇವೆ. 93-94 ನೇ ಆಯವ್ಯಯದಲ್ಲಿ 50 ಲಕ್ಷ ರೂಪಾಯಿ ಈಗಾಗಲೇ ಈ ಯೋಜನೆಗೆ ಮಿಸಲಿಟ್ಟಿದೆ. ಆದರೆ ಇದುವರೆಗೂ ಬಿಡುಗಡೆಯಾಗಿಲ್ಲ. ಕೆಲಸ ಪ್ರಾರಂಭವಾಗಿಲ್ಲ. ಜನರ ಬೆಳೆಗೆ ನೀರು ಸಿಕ್ಕಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಇದರ ಬಗ್ಗೆ ಅವರು ಗಮನ ಹರಿಸಬೇಕು. ಈಗಾಗಲೇ ಈ ವಿಚಾರವನ್ನುಮಾನ್ಯ ನೀರಾವರಿ ಮಂತ್ರಿಗಳ ಗಮನಕ್ಕೆ ಮತ್ತು ಮಾನ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದಿದ್ದೇನೆ. ಡಿಸೆಂಬರ್ ತಿಂಗಳಲ್ಲಿ ಈ ಕೆಲಸ ಮಂಜೂರಾಗಿದ್ದು ಕೇಂದ್ರಸರ್ಕಾರದವರು ರಾಜ್ಯ ಸರ್ಕಾರಕ್ಕೆ ಈ ಹಣವನ್ನು ರೀ-ಇಂಬರ್ಸ್ ಮಾಡುವುದಾದರೂ ಈ ಯೋಜನೆಗೆ ಇನ್ನೂ

ಹಣ ಬಿಡುಗಡೆಯಾಗಿಲ್ಲ. ಅಲ್ಲಿ ರೈತರು ಆಕ್ರೋಶಗೊಂಡು ಸತ್ಯಾಗ್ರಹ, ಧರಣಿಯನ್ನು ಮಾಡುತ್ತಿದ್ದಾರೆ. ಆದರೂ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಅಲ್ಲಿ ಅಶಾಂತಿ ಉದ್ಭವವಾಗುವ ಸಂದರ್ಭ ಇದೆ. ನಾನು ತಾವು ಕೂಡಲೇ ಅಲ್ಲಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಯೋಜನೆಯ ಕೆಲಸ ಪ್ರಾರಂಭವಾಗಲು ಆದೇಶ ಕೊಡಬೇಕು. ಬಜೆಟ್‌ನಲ್ಲಿ 50 ಲಕ್ಷ ರೂ. ಹಣವಿದ್ದರೂ ಕೂಡ ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲ. ಕೆಲಸವನ್ನು ಪ್ರಾರಂಭಿಸಿಲ್ಲ. ಸರ್ಕಾರ ಇದನ್ನು ಗಂಭೀರವಾಗಿ ಯೋಚಿಸಿ ಕೆಲಸ ಪ್ರಾರಂಭಿಸಲು ಆದೇಶ ಕೊಡಬೇಕು. ತಾವು ನಿಧಾನ ಮಾಡಿದರೆ ಅಲ್ಲಿ ರೈತರ ಹೋರಾಟ ಪ್ರಾರಂಭವಾಗುತ್ತದೆ, ಆಗ ಅಶಾಂತಿಗೆ ಕಾರಣವಾಗುತ್ತದೆ. ಆದ್ದರಿಂದ ಸರ್ಕಾರ ಕೂಡಲೇ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಕೈಗೆತ್ತಿಕೊಳ್ಳಲು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದರ ಬಗ್ಗೆ ನನಗೆ ಒಂದು ಪತ್ರವನ್ನು ಕೊಟ್ಟಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಈ ಯೋಜನೆ ಮಂಜೂರಾಗಿದೆ. ಇದು ಕೇಂದ್ರ ಸರ್ಕಾರದ ಯೋಜನೆ. ನೀವು ಇದಕ್ಕೆ ಹಣವನ್ನು ಖರ್ಚುಮಾಡಿದರೆ ಕೇವಲ 15 ದಿನಗೊಳಗೆ ಹಣ ವಾಪಸು ಬರುತ್ತದೆ. ಇದರಿಂದ ಸಾಕಷ್ಟು ನೀರಾವರಿಯಾಗುತ್ತದೆ. ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಕೆಲಸವನ್ನು ಪ್ರಾರಂಭ ಮಾಡಿಸಿ, ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರಿ ಜೆ. ಸಿ. ಮಾಧುಸ್ವಾಮಿ : ಅಲ್ಲಿ ಕೆಲಸ ಮಾಡಿಸುತ್ತೇವೆಂದು ನೀರನ್ನು ಸಹ ಬಿಡಿಸಿಲ್ಲ. ನೀವು ನೀರನ್ನೂ ಬಿಡಿಸದೆ, ಕೆಲಸವನ್ನೂ ಮಾಡಿಸದಿದ್ದರೆ ಶಾಸಕರು ಅಲ್ಲಿ ಜನರಿಗೆ ಏನು ಉತ್ತರ ಹೇಳಬೇಕು? ಅಲ್ಲಿ ಈಗ 15 ಕಿ.ಮೀ. ಕಾಲುವೆ ಕೆಲಸ ಆಗಬೇಕು. ಈ ಕೆಲಸವನ್ನೂ ಮಾಡಿಸದೆ, ನೀರನ್ನೂ ಬಿಡದಿದ್ದರೆ ಹೇಗೆ? ಇದರ ಬಗ್ಗೆ ತಾವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಇದಕ್ಕೆ ಸಂಬಂಧಪಟ್ಟ ಕಡತವನ್ನು ನೋಡದೆ ನಾನು ಹೇಗೆ ಆಶ್ವಾಸನೆಯನ್ನು ಕೊಡಬೇಕು? ಮಾನ್ಯ ಸದಸ್ಯರು ನನ್ನ ಪರಿಸ್ಥಿತಿಯನ್ನೂ ಕೂಡ ಅರ್ಥಮಾಡಿಕೊಳ್ಳಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ : ಸಂಬಂಧಪಟ್ಟ ಮಂತ್ರಿಗಳು ಇಲ್ಲೇ ಇದ್ದಾರೆ, ಅವರ ಗಮನಕ್ಕೆ ತಂದಿದ್ದೇನೆ. ಅವರು ಪತ್ರವನ್ನು ಬರೆದಿದ್ದಾರೆ. ಇಲಾಖೆಯ ಕಾರ್ಯದರ್ಶಿಯವರಿಗೂ ಹೇಳಿದ್ದೇನೆ. ಅವರೂ ಹೇಳಿದ್ದಾರೆ. ಅವರಿಗೆ ಎಲ್ಲಾ ವಿವರಗಳೂ ಗೊತ್ತಿದೆ.